ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿದ ನಿವೇಶನಗಳ ಬಗ್ಗೆ

ಶ್ರೀ ಕಾಂತರಾಜ್ (ಬಿ.ಎಂ.ಎಲ್) (ಸ್ಥಳಿಯ ಸಂಸ್ಥೆಗಳ ಕ್ಷೇತ್ರ) ಹಾಗೂ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನಹೊಂದಿದವರು):-

126 (72+80) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ 10 ವರ್ಷಗಳಲ್ಲಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ನಿವೇಶನ ನಿರ್ಮಾಣಕ್ಕಾಗಿ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು ; ಈ ಜಮೀನಿನಲ್ಲಿ ನಿರ್ಮಿಸಲಾದ ಒಟ್ಟು ನಿವೇಶನಗಳೆಷ್ಟು ; ಅವುಗಳಲ್ಲಿ ಯಾವ ಯಾವ ಅಳತೆಗಳಲ್ಲಿ ಎಷ್ಟು ನಿವೇಶನಗಳನ್ನು ನಿರ್ಮಿಸಲಾಗಿರುತ್ತದೆ; (ವರ್ಷಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ವಶಪಡಿಸಿಕೊಂಡ ಜಮೀನಿನ ಮಾಲೀಕರು/ರೈತರಿಗೆ ಪ್ರತಿ ಎಕರೆಗೆ ನೀಡಲಾಗಿರುವ ಪರಿಹಾರ ಧನವೆಷ್ಟು ; ಪರಿಹಾರಕ್ಕೆ ಅನುಸರಿಸಲಾಗಿರುವ ಮಾನದಂಡಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಇಲ್ಲಿಯವರೆಗೂ ನಿವೇಶನ ಹಂಚಿಕೆಗಾಗಿ ಎಷ್ಟು ಬಾರಿ ಅಧಿಸೂಚನೆಯನ್ನು ಹೊರಡಿಲಾಗಿದೆ ; ಪ್ರತಿ ಅಧಿಸೂಚನೆಯಲ್ಲೂ ಯಾವ ಯಾವ ಅಳತೆಯ ನಿವೇಶನಗಳನ್ನು ಹಂಚಿಕೆಗಾಗಿ ಪ್ರಕಟಿಸಲಾಗಿದೆ ; ಹಾಗೂ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಹಾಗೂ ಹಂಚಿಕೆ ಮಾಡಿ ನಿವೇಶನ ಪಡೆದವರ ಸಂಖ್ಯೆ ಹಾಗೂ ನಿವೇಶನ ಪಡೆಯದಿರುವವರ ಸಂಖ್ಯೆ ಎಷ್ಟು ; ನಿವೇಶನ ಪಡೆಯದಿರುವುದಕ್ಕೆ ಕಾರಣಗಳೇನು ; (ಹೆಸರು ಮತ್ತು ವಿಳಾಸ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

(ಈ) ನಿವೇಶನ ಹಂಚಿಕೆಗೆ ಪ್ರಾಧಿಕಾರವು ಅನುಸರಿಸಲಾಗಿರುವ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)